ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 17/03/2020

# 28 ತಾಸು ಚರ್ಚೆಗೆ ವಿರಾಮ

## ರಾಷ್ಟ್ರಪತಿ, ಪ್ರಧಾನಿಗೆ ಸಂವಿಧಾನ ಚರ್ಚೆಯ ಕ್ರೋಡೀಕರಣ ಸಲ್ಲಿಕೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 17-3-20

70 ವರ್ಷಗಳ ಸ್ವಾತಂತ್ರ್ಯಾ ನಂತರ ಇತಿಹಾಸದಲ್ಲಿ ಮೊದಲ ಬಾರಿಗೆ ವಿಧಾನಸಭೆಯಲ್ಲಿ ನಡೆದ ಸಂವಿಧಾನ ಕುರಿತ ಸುದೀರ್ಘ ಚರ್ಚೆಗೆ ತೆರೆ ಬಿದ್ದಿದೆ. ಚರ್ಚೆಯಲ್ಲಿ ವಿಚಾರ ಮಂಡನೆ ಮಾಡಿದ ಶಾಸಕರ ಅಭಿಪ್ರಾಯ, ಸಲಹೆಗಳನ್ನು ಕ್ರೋಡೀಕರಿಸಿ ರಾಷ್ಟಪತಿ, ಪ್ರಧಾನಮಂತ್ರಿ ಹಾಗೂ ಲೋಕಸಭಾ ಅಧ್ಯಕ್ಷರಿಗೆ ಸಲ್ಲಿಸಲಾಗುತ್ತದೆ ಎಂದು ಚರ್ಚೆಯ ಕೊನೆಯಲ್ಲಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸ್ಪಷ್ಟಪಡಿಸಿದರು.

ಈ ವಿಶೇಷ ಚರ್ಚೆಯಲ್ಲಿ ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕರು ಸೇರಿ 47 ಸದಸ್ಯರು 28 ಗಂಟೆ ಮಾತನಾಡಿದ್ದಾರೆ. ಸದಸ್ಯರು ತಮ್ಮದೇ ಆದ ಭಾವನೆಗಳನ್ನು ವ್ಯಕ್ತಪಡಿಸಿ ದ್ದಾರೆ. ಕರ್ನಾಟಕದ ಇತಿಹಾಸದಲ್ಲಿ 15ನೇ ವಿಧಾನಸಭೆಯ 6ನೇ ಅಧಿವೇಶನವು ಸುವರ್ಣಾಕ್ಷರಗಳಲ್ಲಿ ಬರೆದಿಡ ಬಹುದಾಗಿದ್ದೆಂದು ಭಾವಿಸಿದ್ದೇವೆ ಎಂದರು.



### ಸ್ಪೀಕರ್ ಕಣ್ಣೀರು

**ಸಂವಿಧಾನದ ಮೇಲಿನ ಚರ್ಚೆಯ ಕೊನೆಯಲ್ಲಿ ಭಾವುಕರಾದ ಸ್ಪೀಕರ್ ಒಂದು ನಿಮಿಷ ಕಾಲ ಭಾಷಣ ನಿಲ್ಲಿಸಿದರು. ಕಣ್ಣಲ್ಲಿ ಬರುತ್ತಿದ್ದ ನೀರು ಒರೆಸಿಕೊಂಡು ಸವಾರಿಸಿಕೊಂಡ ಅವರು ನಂತರ ಭಾಷಣಕ್ಕೆ ಕೊನೆ ಹಾಡಿದರು.**

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ ರಚಿತವಾದ ಸಂವಿಧಾನ ಇರುವುದರಿಂದ ನಾವಿದ್ದೇವೆ ಎನ್ನುವುದು ನನ್ನ ಪ್ರಾಮಾಣಿಕ ತಿಳುವಳಿಕೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಂವಿಧಾನದ ಮೂಲಭೂತ ಕರ್ತವ್ಯ, ಹಕ್ಕುಗಳನ್ನು ತಲುಪಿಸುತ್ತೇವೆ ಎನ್ನುವ ಪ್ರಾಮಾಣಿಕ ಭರವಸೆಯನ್ನು ರಾಜ್ಯದ ಜನತೆಗೆ ನಾವೆಲ್ಲರೂ ನೀಡೋಣ. ಪಕ್ಷ ಭೇದ ಮರೆತು ಸಂವಿಧಾನದ ಆಶಯಗಳೇ ನಮ್ಮ ಆದರ್ಶಗಳು, ಸಂವಿಧಾನದ ತಿರುಳೇ ನಮ್ಮ ಮಂತ್ರ, ಸಂವಿಧಾನದ ವಿಧಿಗಳೇ ನಮ್ಮ ಮಾರ್ಗಸೂಚಿಗಳು ಎಂದು ಪ್ರತಿಜ್ಞೆ ಮಾಡೋಣವೆಂದು ಶಾಸಕರಿಗೆ ಕರೆ ನೀಡಿದರು.

ಮಾಜಿ ಸ್ಪೀಕರ್ ರಮೇಶ್‌ಕುಮಾರ್, ಸಂವಿಧಾನದ ಮೇಲಿನ ಚರ್ಚೆಗೆ ಅವಕಾಶ ಕೊಡುವುದರಿಂದ ಸದನದ ಘನತೆ ಹೆಚ್ಚಿಸಿದ್ದೀರಿ, ಶಾಸಕರು ಅನೇಕ ವಿಚಾರ ಅರಿಯುವಂತಾಯಿತು. ಇಡೀ ಸದನದ ಪರವಾಗಿ ನಿಮಗೆ ಸೆಲ್ಯೂಟ್ ಎಂದು ಸ್ಪೀಕರ್‌ಗೆ ಕೈ ಮುಗಿದರು. ಆಡಳಿತ ಪಕ್ಷದ ಪರವಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಜೆಡಿಎಸ್ ಪರವಾಗಿ ಎಚ್.ಕೆ.ಕುಮಾರಸ್ವಾಮಿ ಅಭಿನಂದನೆ ಸಲ್ಲಿಸಿದರು.



ವಿಜಯವಾಣಿ ಚಿತ್ರ

### ವ್ಯವಸ್ಥೆ ಬದಲಾಗಲಿ

**ಚು**ನಾವಣೆ ವ್ಯವಸ್ಥೆ ಬದಲಾಗಲಿ ಎಂಬ ಸಲಹೆ ಕಲಾಪದಲ್ಲೂ ಪ್ರಸ್ತಾಪವಾಯಿತು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಶಿವಲಿಂಗೇಗೌಡ, ಸಿದ್ದು ಸವದಿ, ಮಹೇಶ್ ಕುಮಠಳ್ಳಿ, ಅನ್ನದಾನಿ ಸೇರಿ ಹಲವು ಶಾಸಕರು ಅಭಿಪ್ರಾಯ ನೀಡಿ, ಭ್ರಷ್ಟಾಚಾರ ನಿಲ್ಲಬೇಕಾದರೆ ಮೊದಲು ಚುನಾವಣೆ ವ್ಯವಸ್ಥೆ ಬದಲಿಸಬೇಕಾದ ಅಗತ್ಯವಿದೆ. ಜತೆಗೆ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಇಲ್ಲದಿದ್ದರೆ 10ನೇ ಷೆಡ್ಯೂಲ್ ಅನ್ನು ತೆಗೆಯುವುದೇ ಒಳಿತು ಎಂದು ಅಭಿಪ್ರಾಯಟ್ಟರು.

### ಚರ್ಚೆಗೆ ಪ್ರೇರಣೆ ಏನು?

**ಸಂವಿಧಾನ ಮೇಲಿನ ಚರ್ಚೆ ಮಾಡಲು ನಿಮಗೆ ಯಾರ ಪ್ರೇರಣೆ? ಎಂದು ನೇರವಾಗಿ ಸ್ಪೀಕರ್ ಅವರನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೇಳಿದರು. ನಾವಂತೂ ಯಾರೂ ಸಂವಿಧಾನ ಮೇಲಿನ ಚರ್ಚೆ ಮಾಡಿ ಎಂದು ಒತ್ತಾಯಿಸಿರಲಿಲ್ಲ. ಬೇರೆಯವರೂ ಕೇಳಿರಲಿಲ್ಲ. ಆದರೂ ಈ ಬಗ್ಗೆ ಚರ್ಚೆ ಮಾಡಲು ಮುಂದಾಗಿದ್ದು ಏನು ವಿಶೇಷ ಎಂದು ಪ್ರಶ್ನಿಸಿದರು. 'ಸಂವಿಧಾನಕ್ಕೆ 70 ವರ್ಷ ತುಂಬಿದ ಹೊತ್ತಿನಲ್ಲಿ ಚರ್ಚೆ ನಡೆಯಲಿ ಎಂದು ನಾನೇ ನಿರ್ಧರಿಸಿದೆ' ಎಂದು ಸ್ಪೀಕರ್ ಕಾಗೇರಿ ಹೇಳಿದ ಬಳಿಕ, ಹಾಗಾದರೆ ನಾನು ನಿಮಗೆ ಅಭಿನಂದಿಸುತ್ತೇನೆ ಎಂದರು. 65 ಜನ ಶಾಸಕರು ಸದನದಲ್ಲಿ ಸಂವಿಧಾನ ಬಗ್ಗೆ ಚರ್ಚೆ ಮಾಡಿರುವುದು. ಇಷ್ಟು ಸುದೀರ್ಘ ಅವಧಿ ತನಕ ಒಂದೇ ವಿಷಯ ಬಗ್ಗೆ ಚರ್ಚೆ ಆಗಿರುವುದನ್ನು ನಾನಂತೂ ನೋಡಿರಲಿಲ್ಲ ಎಂದರು.**



### 18 ವರ್ಷಗಳ ಬಳಿಕ ಸಚಿವರಾದ ಗೌಡರು

ಎಚ್.ಡಿ.ದೇವೇಗೌಡರು ಶಾಸಕರಾಗಿ 18 ವರ್ಷದ ಬಳಿಕ ಸಚಿವರಾದರು. ನಾನು ಶಾಸಕನಾಗಿ 18 ತಿಂಗಳಿಗೆ ಸಚಿವನಾದೆ. ಕುಮಾರಸ್ವಾಮಿ ಅವರಿಗೆ ಮೊದಲು ಶಾಸಕರಾದ ಅವಧಿಯಲ್ಲಿಯೇ ಸಿಎಂ ಆಗುವ ಯೋಗ ಕೂಡಿ ಬಂತು ಎಂದು ಎಚ್.ಡಿ.ರೇವಣ್ಣ ಹೇಳಿದ್ದು ಸದನದಲ್ಲಿ ಚರ್ಚೆಗೆ ಗ್ರಾಸವಾಯಿತು. 'ಓ ನಿಮ್ಮ ಹಣೆಬರಹವನ್ನು ಇಲ್ಲಿ ಹೇಳಿಕೊಳ್ಳುತ್ತಿದ್ದೀರಾ?' ಎಂದು ಜೆ.ಸಿ.ಮಾಧುಸ್ವಾಮಿ ಕಿಚಾಯಿಸಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕುಮಾರಸ್ವಾಮಿ ಜಾತಕ ಚೆನ್ನಾಗಿದೆ. ಶಾಸಕರಾದ ಮೊದಲ ಅವಧಿಯಲ್ಲಿಯೇ ಸಿಎಂ ಆಗುವ ಯೋಗವಿದೆ ಎಂದು ದೇವೇಗೌಡರು ತುಂಬಾ ಹಿಂದೆಯೇ ನಮಗೆ ಹೇಳಿದ್ದರು. ಆದರೆ ಯಾಕೋ ರೇವಣ್ಣ ಜಾತಕ ದೇವೇಗೌಡರ ಜಾತಕ ಜತೆಗೆ ಸೇರಿಕೊಂಡಿದೆ. ಅವರಿಗಿನ್ನೂ ಅದೃಷ್ಟ ಒಲಿದುಬರಬೇಕು ಎಂದಾಗ ಸದನ ನಗೆಗಡಲಿನಲ್ಲಿ ತೇಲಿತು.

